ತಮಾಷೆಯಾಗಿಯೂ ಕಂಡಿರಬಹುದು. ಆದರೆ ಈ ನಿರ್ಧಾರ ಅರಗಿಸಿಕೊಳ್ಳಲಾಗದ ಅವರ ಮನೆಯ ಸದಸ್ಯರ ಗತಿಯೇನು? ಹಾಗಂತ ಅವರು ಬರೀ ನೀರು ಗೊಬ್ಬರ ಪೂರೈಸಿಕೊಂಡು ಇರಲು ಸಾಧ್ಯವೇ? ಸುಮನ ಒಂದುಥರ **Applied Botany** ಹಾಗೆ. 'ಆನ್ವಯಿಕ ಮರ.' ಬೇಕಿದ್ದಾಗ ಮರದ ಲಾಜಿಕ್ ಬೇಕಿಲ್ಲದಿದ್ದಾಗ ಮನುಷ್ಯರ ಲಾಜಿಕ್. ಈಗ ಅವರನ್ನು ಭೇಟಿಯಾಗುವವರೆಲ್ಲ ಮರವಾದ ಎಕ್ಸ್‌ಪೀರಿಯೆನ್ಸ್ ಕೇಳಿ ಕೇಳಿ ಅವರು ಅದನ್ನು ಹೇಳಿ ಹೇಳಿ ಆಮೇಲೆ ಅದನ್ನು ಬರೆದೂ ಬರೆದೂ ಕ್ಲಾರಿಫಿಕೇಶನ್ ಕೊಟ್ಟೂ ಕೊಟ್ಟೂ ಅವರೇ ಒಂದು ನ್ಯೂಸ್ ಛಾನೆಲ್ ಥರ ಆಗಿರಬಹುದಾ ಅಂತ. ಅದೇನೇ ಇರಲಿ ಅವರು ಈಗ ಹಲವು ರೀತಿಯ ಆಲೋಚನೆಗಳಿಗೆ ಸಂಕೇತ. ಮರವೂ ಕೂಡ. ಹಾಗಿದ್ದರೆ ಕಲ್ಲೊಳಗೆ ದೇವರು ಕೂತದ್ದೂ ಸಂಕೇತವಲ್ಲವೇ? ಯಾರು ಯಾರನ್ನು ಯಾವುದು ಯಾವಾಗ ಯಾಕಾಗಿ ಏನೆಂದು ಊಹಿಸಿಕೊಳ್ಳುತ್ತಾರೋ ಕರೆದುಕೊಳ್ಳುತ್ತಾರೋ ಗೊತ್ತಾಗದಿರುವುದೇ ಹೊಸ ಕಾಲ. ಬೆಣಚು ಕಲ್ಲು ತೋರಿಸಿ ಗುಬ್ಬಿ ಅಂದರೆ ನಂಬಬೇಕು. ಗುಬ್ಬಿಯನ್ನು ತೋರಿಸಿ ಹೆಂಡತಿ ಅಂದರೂ ಸುಮ್ಮನಿರಬೇಕು. ಹೆಂಡತಿಯನ್ನು ತೋರಿಸಿ ಮೊಬೈಲ್ ಅಂದರೂ ಬಾಯಿ ಮುಚ್ಚಿಕೊಂಡಿರಬೇಕು. ವಸ್ತುವಿಗೆ ತಾನು ಅದಲ್ಲ ಎಂದು ಹೇಳುವ ಶಕ್ತಿಯಿಲ್ಲ. ದೇಹಕ್ಕೆ ತಾನು ಅದಲ್ಲ ಎಂದು ಹೇಳಲು ಭಾಷೆಯಿದ್ದರೂ ಬಳಸುವ ಇಚ್ಛೆಯಿಲ್ಲ. ಆದರೂ ಯಾರು ಮತ್ತು ಯಾವುದು, ಯಾವಾಗ ವಸ್ತು ಯಾವಾಗ ಜೀವ? ಯಾವಾಗ ಕಲ್ಲು ಯಾವಾಗ ದೇಹ ? ಎ.ಕೆ. ರಾಮಾನುಜನ್ ಪದ್ಯವೊಂದನ್ನು

**UUU, UUU**
**UU UU UU**
**U UUU UU**

ಹೀಗೆ ಬರೆದು ಅದಕ್ಕೆ 'ಬ್ರಹ್ಮಜ್ಞಾನ' ಎಂದು ಹೆಸರಿಟ್ಟರು. ಹೀಗಾಗಿದೆ ನಮ್ಮ ಪರಿಸ್ಥಿತಿ. ಅದು ಹೌದೋ ಅಲ್ಲವೋ ಅಂತ ಕೇಳಲು ಯಾವ ಬ್ರಹ್ಮನನ್ನು ಹುಡುಕಬೇಕು? ಹೋಗಲಿ ಬಿಡಿ, ಯಾರು ಏನಾದರೂ ಆಗಿಕೊಳ್ಳಲಿ ಹೋಗಿಕೊಳ್ಳಲಿ, ನನಗೀಗ ಒಂದು ಕೆಲಸ ಆಗಬೇಕಿದೆ. ಅದೇನೆಂದರೆ, ನಾನು ಐದನೇ ತರಗತಿಯಲ್ಲಿದ್ದಾಗ 'ಕಾಗದದ ಪಾಪಚ್ಚಿ' ಎಂಬ ಪುಸ್ತಕ ಒಂದನ್ನು ಶಾಲೆಯಲ್ಲಿ ಓದಲು ಕೊಟ್ಟಿದ್ದರು. ಕಾಗದದಲ್ಲಿ ಬರೆದ ಬಾಲಕನ ಚಿತ್ರವೊಂದಕ್ಕೆ ಜೀವ ಬಂದು ಅದು ಓಡಲು ತೊಡಗುತ್ತದೆ. ಆಮೇಲೆ ಏನೆಲ್ಲ ಸಾಹಸ ಮಾಡುತ್ತದೆ. ಇಡೀ ಪ್ರಪಂಚವನ್ನೇ ಸುತ್ತುತ್ತದೆ. ಈಗ ಅದು ಎಲ್ಲಿದೆ ಗೊತ್ತಿಲ್ಲ. ಇದುವರೆಗೆ ನಾವು ಮಾತನಾಡಿದ ವಸ್ತುಗಳು ಜೀವಗಳು ಏನೇ ಇರಲಿ ಇಲ್ಲದಿರಲಿ, ಆ ಕಾಗದದ ಪಾಪಚ್ಚಿಗೆ ಜೀವ ಬರಲಿ, ಮತ್ತು ನನ್ನನ್ನು ಹುಡುಕಿಕೊಂಡು ಬರಲಿ. ಬರಲಿ ಪ್ಲೀಸ್...

## ಜಿ.ಕೆ. ರವೀಂದ್ರಕುಮಾರ್

ಕವಿ, ವಿಮರ್ಶಕ ಜಿ.ಕೆ.ರವೀಂದ್ರಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯವರು. ರಾಜ್ಯದ ಹಲವಾರು ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ಬೆಂಗಳೂರು ಆಕಾಶವಾಣಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 'ಸಿಕಾಡ', 'ಪ್ಯಾಂಜಿಯ', 'ಕದವಿಲ್ಲದ ಊರಲ್ಲಿ', 'ಒಂದುನೂಲಿನ ಜಾಡು' 'ಮರವನಪ್ಪಿದ ಬಳ್ಳಿ' ಅವರ ಕವನ ಸಂಕಲನಗಳು. 'ಸುಪ್ತಸ್ವರ', 'ಪುನರ್ಭವ' ಮುಂತಾದ ಗದ್ಯ ಕೃತಿಗಳನ್ನೂ ಪ್ರಕಟಿಸಿದ್ದಾರೆ.